ಯಾಗಿದೆ. ಆ ಜಾಗವನ್ನು ಸ್ವಚ್ಛ ಮಾಡಿಕೊಡುವುದಾಗಿ ಹೇಳಿದ್ದರು. ಮಾನ್ಯ ಮಂತ್ರಿಗಳು ಜಾಗವನ್ನು ಪರಿಶೀಲನೆ ಮಾಡಿ, ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿ ಪುನ: ತಮ್ಮ ವಿಚಾರವನ್ನು ನ್ಯಾಯವಾಗಿ ಬದಲಾವಣೆ ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.— ನಾನು ಮೊನ್ನೆ ತಾನೇ ಪರಿಶೀಲನೆ ಮಾಡಿದ್ದೇನೆ. ಆ ಜಾಗದಲ್ಲಿ ಕಲ್ಲು ಗುಂಡುಗಳಿರುವುದು ನಿಜ. ಅದನ್ನೆಲ್ಲ ತೆಗೆಸಿ ಆ ಜಾಗವನ್ನು ಜೊಕ್ಕಟವಾಗಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

SETTING UP OF TECHNICAL CELL

418 Sri. M. VEERAPPA MOILY (Karkal).– Will the Chief Minister be pleased to state.—

Whether the Government has any proposal before it to set up technical Cell, attached to each Minister, consisting of experts on respective subjects for the purpose of consultation and to make each Ministery more job oriented and purposeful ?

Sri H. M. CHANNABASAPPA (Minister for Public Works & Electricity) [on behalf of (Sri D. DEVARAJ URS Chief Minister)].— No.

Sri M. VEERAPPA MOULY.— We find that lagislative and executive decisions are taken either on beauracratic note or on political reasons. Does the Government think atleast that there are also some experts who could involve themselves in decision making process and whereby we could avoid piece-meal legislations and defective execution of the legislations. Will the Government atleast consider to form technical cells for each Department ?

†Sri H. M. CHANNABASAPPA.– I don't think there is any necessity for technical cells to be created on the lines the hon. member has suggested. Wherever Government have taken decisions on matters involving technical points Government does take the opinion and advice of the technical men.

ಶ್ರೀ ಕೆ ಆರ್ ಶ್ರೀನಿವಾಸಲು ನಾಯ್ಡು.— ರಾಜ್ಯಕ್ಕೆ ದಕ್ಷ ಮತ್ತು ಒಳ್ಳೆಯ ಆಡಳಿತವನ್ನು ಕೊಡುವ ದೃಷ್ಟಿಯಿಂದ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹೆಚ್ಚು ಎಕಾನಮಿ ಮೆಷರ್ಸ್ ಇರುವುದರಿಂದ ಪರಿಣತರನ್ನು ನೇಮಕ ಮಾಡುವುದಕ್ಕೆ ಬದಲು

ಇಲಾಖೆಯಲ್ಲಿನ ಕೆಲವರನ್ನು ಆರಿಸಿ ತಾಂತ್ರಿಕ ಸಲಹೆ ಕೊಡಲು ಇಡುವುದು ಒಳ್ಳೆಯ ದಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ — ಮಾನ್ಯ ಸದಸ್ಯರು ಮೂಲ ಪ್ರಶ್ನೆಯಲ್ಲಿ ಕೇಳಿರುವಂಥ ರೀತಿಯಲ್ಲಿ ಟೆಕ್ನಿಕಲ್ ಸೆಲ್ ಅವಶ್ಯಕವಿಲ್ಲ. ಎಲ್ಲೆಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ತಾಂತ್ರಿಕ ತಜ್ಞರ ಸಲಹೆ ಬೇಕೋ ಆಯಾ ಕಾಲದಲ್ಲಿ ಅಂಥ ತಾಂತ್ರಿಕ ಸಲಹೆಯನ್ನು ಪಡೆದೇ ತೀರ್ಮಾನಗಳನ್ನು ನಾವು ಮಾಡತಕ್ಕದ್ದು.

ಶ್ರೀ ಎಂ. ಎಸ್. ಕೃಷ್ಣನ್.— ಪಾರ್ಲಿಮೆಂಟಿನಲ್ಲಿ ಯಾವ ರೀತಿ ಒಂದೊಂದು ಮಿನಿಸ್ಟ್ರಿಗೂ ಕನ್‌ಸ್ಟ್ಟೀಟಿವ್ ಅಥವಾ ಅಡ್ವೈಸರಿ ಕಮಿಟಿಗಳನ್ನು ಅಲ್ಲಿನ ಕೆಲವು ನಾಯಕರನ್ನು ಸೇರಿಸಿ ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಕೂಡ ಎಲ್ಲ ಮಿನಿಸ್ಟ್ರಿಗಳಿಗೂ ಸಲಹೆ ಮಾಡಲು ಕಮಿಟಿಗಳನ್ನು ಮಾಡುವಕ್ಕೆ ಯೋಜನೆ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪ್ರಶ್ನೆ ಇರುವುದು ತಾಂತ್ರಿಕಜ್ಞರ ಸೆಲ್ ರಚನೆ ಮಾಡುವ ವಿಚಾರದಲ್ಲಿ. ಮಾನ್ಯ ಸದಸ್ಯರು ಕೇಳುತ್ತಿರುವುದು ಸಲಹಾ ಸಮಿತಿಗಳನ್ನು ಮಾಡುತ್ತೀರಾ ಎಂದು. ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

NON-PAYMENT OF SALARY TO PEONS

471. Sri B. S. VEERABHADRAPPA (Kudligi).— Will the Minister for Education be pleased to state:—

(a) whether it has come to the notice of the Government that the salary of 34 peons who are working in all the school of Bellary District Local Boards which were taken over by the Goverament has not been paid for the last 3–4 years, since the date of their taking over ;

(b) if so, the action taken by the Government in this behalf ?

Sri A. R. BADARINARAYANA (Minister for Education).—

(a) Yes.

(b) The matter of payment of arrears of salary to these 34 persons is under the active concideration of the Government.

ಶ್ರೀ ಬಿ. ಎಸ್. ವೀರಭದ್ರಪ್ಪ.— ಈ ಇಳ ನೌಕರರ ಸಂಬಳವನ್ನು ಎಷ್ಟು ದಿವಸಗಳಲ್ಲಿ ಕೊಡುವ ಪ್ರಯತ್ನ ಮಾಡುತ್ತಾರೆ?

† ಶ್ರೀ ಎ. ಆರ್. ಬದರೀನಾರಾಯಣ — ಈ ವಿಚಾರ ಸರಕಾರದ ಮುಂದೆ ಬಂದಿದ್ದು ಹಣಕಾಸು ಇಲಾಖೆಯವರಿಂದ ಕೊಡುವದಕ್ಕಾಗುವದಿಲ್ಲವೆನ್ನುವ ತೀರ್ಮಾ